Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಅಥಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 28 ಸಂಚಿಕೆ 182] ಗುರುವಾರ 12—4—45 [3 ಪೈ

206(ಎ)

ವಿವಿಧ ವರ್ತಮಾನ

ಷೋಡಾ

ಅಮೇರಿಕ ಸೇನೆಗಳಿಗೆ ವಿ-2 ರಾಕೆಟ್ ಬಾಂಬುಗಳು ಸಜೀವ ಸಿಕ್ಕಿ ಅದರ ಗುಟ್ಟೆನ್ನೆಲ್ಲಾ ತಿಳಿದುಕೊಂಡರು. ಈ ರಾಕೆಟ್ ಗಳು ಮನುಷ್ಯನ ಮನಸ್ಸಿಗಿಂತ ಹೆಚ್ಚು ವೇಗದಲ್ಲಿ ಹೋಗುವುದರಿಂದ ಭೂಮಿಯಿಂದ ಇದನ್ನು ಬಿಡಲು ಸಾಧ್ಯವಿಲ್ಲ. (ಯು. ವಾರ್ತೆ)

ಂ ರ

ಚೀನೂರ್ ಮತ್ತು ಆಷ್ಟಿ ಹೀಬಸ್ ಕಾರ್ಪಸ್ ಅರ್ಜಿಯನ್ನು ನುರಣದಾಡ ನೆಗೆ ಗುರಿಯಾದ 7 ಮಂದಿ ಪರ ಲಾಯರ್ ಡಾ || ಕೆದರ್‌ನಾಥರು 100 ಡಿಗ್ರಿ ಜ್ವರವಿದ್ದರೂ ವಾದಿಸುತ್ತಿದ್ದು, ಜ್ವರವು ಹೆಚ್ಚಿದ್ದರಿಂದ ವಾದವನ್ನು ನುಂದಕ್ಕೆ ಹಾಕಬೇಕಾಯಿತು.

ಂ ರ

ಭಾರತದಿಂದ ಈಜಿಪ್ಟಿಟ್ಟಿಗೆ ಒಟ್ಟೆ ರಫ್ತಾಗಬೇಕಾದ್ದರಿಂದ ಚೀಣಾಕ್ಕೆ ಒಟ್ಟೆ ರಫ್ತಿಗೆ ನಿಲ್ಲಿಸಲಾಗಿದೆ

ಂ ರ

ಯೂರೋಪಿಯನ್ ಚಲನವಲನಗಳನ್ನು ಹದ್ದಿನಲ್ಲಿರಿಸಲು ಮೈಸೂರು ಸರಕಾರವು ಕೆಲವು ಸ್ಪೆಷಲ್ ಮತ್ತು ಡಿಟಿಕ್ಟಿವ್ ಶಾಸನವನ್ನು ಜಾರಿಗೆ ತಂದಿರುವದು. 3-4-45 ರಿಂದ ಜಾರಿಗೆ ಬಂದಿದೆ, ಯುದ್ಧ ನುಗಿಯುವವರೆಗೂ ಜಾರಿಯಲ್ಲಿರುವದು

ಂ ರ

ಸ್ಯಾಕ್ರಫ್ರಾನ್ಸಿಸ್ಕೋ ಸಮ್ಮೇಳನವು ಅಸಫಲಯಾದರೆ ಅದು 3 ನೇ ಯುದ್ಧಕ್ಕೆ ಪೀಠಿಕೆಯೆಂದು ಬ್ರಿಟನ್ನಿನಲ್ಲಿರುವ ಭಾರತೀಯ ಕಾಂಗ್ರೆಸ್ಸಿನವರ ಅಭಿಪ್ರಾಯವಾಗಿದೆ.

ರ ರ

ಭಾರತೀಯ ಸೇನೆಯು ಜರ್ಮನಿಯ ಸೋಲಾದಮೇಲೆ ಜರಗಿವ ವಿಜಯೋತ್ಸವದಲ್ಲಿ ಭಾಗವಹಿಸುವುದೆಂದು ಕಮ್ಯಾಂಡರ್-ಇನ್-ಚೀಫರು ಕೇಂದ್ರಸಭೆಯಲ್ಲಿ ಹೇಳಿದರು.

ಂ ಂ

ಪಾಟ್ನಾದಲ್ಲಿ ಕೆಲವು ವಿದ್ಯಾರ್ಥಿಗಳು ಟಿಕೀಟಿಲ್ಲದೆ ರೈಲಿನಲ್ಲಿ ಪ್ರಯಾಣ ಮಾಡಿದರೆಂದು ಅವರನ್ನೆಲ್ಲಾ ಕೂಲಿಗಳ ಕೈಲಿ ಹೊಡೆಸಿದರು. ಆ ಊರಿನ ವಿದ್ಯಾರ್ಥಿಗಳೆಲ್ಲಾ ಒಟ್ಟುಗೂಡಿ ರೈಲ್ವೇ ಸ್ಟೇಷನ್ನಿಗೆ ಹೋಗಿ ರೈಲ್ವೇ ಕೆಲಸಗಾರರನ್ನೆಲ್ಲಾ ಹೊಡೆದರು.

ಂ ಂ

ಅಮೇರಿಕನ್ನರು ಒಂದು ಜರ್ಮನ್ ನಗರವನ್ನು ಹಿಡಿದಾಗ ಒಂದು ದಿವಸದ ನುಟ್ಟಿಗೆ ಅಲ್ಲಿ ಹೈದಾಗಿದ್ದ ಯುಗೋಸ್ಲೋವಿಕಿಯಾದವನನ್ನು ಗವರ್ನರನ್ನಾಗಿ ಮಾಡಿದ್ದರು.

ಜಪಾನರು ಬರ್ಮಾ ಮತ್ತು ಮಲೆಯಾದಿಂದ ವಾಪಸಾಗುವರೇ?

ಚಂಕಿಂಗ್ ಏ 9 — ಈಚಿಗೆ ಆದ ರಾಜಕೀಯ ಮತ್ತು ಮಿಲಿಟರಿ ಬದಲಾವಣೆಗಳಿಂದ, ಜಪಾನರು ಬರ್ಮಾ ಮತ್ತು ಮಲೆಯಾದಿಂದ ವಾಪಸ್ಸಾಗ ಬಹುದೆಂದು ವರ್ತಮಾನ ಪತ್ರಿಕೆಗಳು ಪ್ರಾಂಭಿಸಿವೆ ಎಂಬ ಒಂದು ಪತ್ರಿಕೆಯು ಇದಕ್ಕೆ ಕಾರಣವನ್ನು ಈ ರೀತಿ ಕೊಟ್ಟಿದೆ — ಪೆಸಿಫಿಕ್ ಮತ್ತು ಬರ್ಮಾದಲ್ಲಿನ ಸೋಲು ಜಪಾನ್ ರಾಜ್ಯಕ್ಕೆ ಒದಗಿರುವ ಭೀತಿ. ರಷ್ಯದವರ ಆಕ್ರಮಣದ ಬಗ್ಗೆ ಪೂರ್ಣ ಭದ್ರತೆ. ಚೀನಾ ದೇಶದ ತಿರವಿಲ್ಲಿ ಅಮೇರಿಕದವರು ಒಂದಿಳಯಬಹುದೆಂಬುದು.

ಕರ್ನಾಲ್ ಸ್ಪೊಡಕ್ಸ್ಸಿನವರು ' ಷಹಜಹಾನ್ ' ನಲ್ಲಿ ಅಭಿನಯಿಸಲು ಸಂಗೀತ ಬಲ್ಲ, ನೋಡಲು ಚೆನ್ನಾಗಿರುವ, ಉರ್ದು ಚೆನ್ನಾಗಿ ತಿಳಿದು ಮಾತನಾಡಬಲ್ಲ ಮೂರು ಮಂದಿ ಯುವತಿಯರನ್ನು ಚುನಾಯಿಸುತ್ತಿರುವರು. ಇವರಿಗೆ ತಲಾ 50 ಸಾವಿರ ರೂ. ಕೊಡುವವರಾಗಿರುವರು.

ಕಲ್ಕತ್ತಾ ಏ 10 — ಒಂಗಾಳಾದಲ್ಲಿ ಪ್ರಬಲ ಕಾಳ ಸಂತೆ ಇರುವುದೆಂದು ರೋಟರಿ ಕ್ಲಬ್ ಮೀಟಿಂಗಿನಲ್ಲಿ ಮಿ || ಗ್ರೆಹಿನ್ನರು ಹೇಳಿದರು. ಭಾರತವು ಸ್ವರಿರಾಜ್ಯದ ಮೆಟ್ಟಲಲ್ಲಿರುವುದು. ಆದರೆ ಲಂಚರುಷವತ್ತು, ಅವಾವಾಸ್ಯೆ ವ್ಯಾಪಾರಗಳಿದ್ದರೆ ಏನು ಬಾಳಾದೀತೆಂದರು, 1943 ರಲ್ಲಿ ಆಹಾರ ಕ್ಷಾಮವನ್ನು ತಂದೊಡ್ಡಿದ ಭಾರಿ ಶೇಖರಣ, ಕಾಳ ಸಂತೆ, ಅಧಿಕ ಲಾಭ ಪಡೆಯುವಿಕೆಗಳು ಈಗ ಒಟ್ಟೆ ವಿಷಯದಲ್ಲಿ ತಂದೊಡ್ಡಿವೆಯೆಂದರು.

ಕ್ಷೀಪ್ರದಲ್ಲೇ ರಷ್ಯಾ ಜಪಾನ್ ಯುದ್ಧವಾಗುವ ಸಂಭವವಿಲ್ಲವೆಂದು ಜಪಾನ್ ವಾರ್ತಾ ಸಂಸ್ಥೆ ಪ್ರಕಟಿಸಿದೆ.

ಯುದ್ಧಪ್ರಾರಂಭವಾದಾಗಿನಿಂದ ಈ ವರ್ಷ ಫೆಬ್ರವರಿ 28 ರವರೆಗೆ ಯುದ್ಧದಲ್ಲಿ 163480 ಬಾರತೀಯರಿಗೆ ಪ್ರಾಣಸಂಕಟವಾಗಿದೆ.

ಡೆನ್ಮಾರ್ಕನ್ನು ಮಿತ್ರರು ಮುತ್ತುವರೆಂದು ನಾಜಿಗಳ ಭೀತರಾಗಿದ್ದಾರೆ.

ಮುಂಬೈನ ' ಚರ್ಚಿಲ್ ಕಾಫೆ ' ಹೋಟಲ್‌ನಲ್ಲಿ ಒಬ್ಬ ಕ್ರಿಶ್ಚಿಯನ್ ಡಾಕ್ಟರು ಮತ್ತು ಅವನ ಕಾಂಪೌಂಡರೂ ಟೀ ಕುಡಿಯಲು ಹೋದರು. ಅವರು ಕೂಳಿತಿದ್ದ ಜಾಗದಿಂದ ಎಬ್ಬಿಸಿ ಮತ್ತೊಂದು ಟೇಬಲ್ (ಒಟ್ಟೆ ಇಲ್ಲದ) ಹತ್ತಿರಕ್ಕೆ ಓಡಿಸಿದರು, ಒಟ್ಟೆಹಾಕಿರುವ ಟೇಬಲ್ ಯೂರೋಪಿಯನ್ನರಿಗೆ ಮಾತ್ರವಂತೆ!

ಮದ್ರಾಸು ಇಲಾಖೆಯಲ್ಲಿ ' ನ್ಯಾಷನಲ್ ವಾರ್ ಫ್ರಂಟ್ ' ಪ್ರಚಾರಕ್ಕಾಗಿ ಆಂಧ್ರ ತಮಿಳು ನಾಡಿನ ಗ್ರಾಮ ವಾಚನಾಲಯಗಳಿಗೆ ಆಂಧ್ರ ತಮಿಳು ಪತ್ರಿಕೆಗಳ ಸರಬರಾಯಿಗಾಗಿ ರೂ. 84 ಸಾವಿರ, ಕೇರಳಕ್ಕೆ ರೂ. 5 ಸಾವಿರವನ್ನು ಮದರಾಸು ಸರ್ಕಾರದವರು ತಮ್ಮ ಬಜೆಟ್ಟಿನಲ್ಲಿ ಮಂಜೂರಾತ್ತಿರುವರೆಂದೂ, ಆದರೆ ಪೂರ್ವ ಕರ್ನಾಟಕಕ್ಕೆ ಏನೂ ಇಲ್ಲವೆಂದೂ ತಿಳಿಯಬಂದಿದೆ.

ಯುದ್ಧ ವಾರ್ತೆ

ಯುರೋಪ್ ರಂಗ

ಯುರೋಪಿನಲ್ಲಿ ಕದನ — ಮುಕ್ಕಾಲು ಭಾಗವೆಲ್ಲಾ ರಷ್ಯನರ ವಶವಾಗಿದೆ. ಗ್ಯಾಸ್ ರೈಲ್ವೆ ನಿಲ್ದಾಣದ ಹತ್ತಿರ ರಷ್ಯನ್ ಸೇನೆ ಬಂದಿದೆ. ಮೊರೆವಿಯಾ ಬಳಿ ರಷ್ಯನರು ಒಂದು ಸ್ಥಳ ಹಿಡಿದರು.

ಜರ್ಮನಿ — ಹ್ಯಾನೋವರ್ ನಾರ್ಡ್‌ಹೌಸೆನ್ ನಗರಗಳು ಮಿತ್ರ ವಶವಾಯಿತು. ಬ್ರನ್ಸ್‌ವಿಕ್ ರಸ್ತೆ ಕತ್ತರಿಸಲಾಗಿದೆ. ಬರ್ಲಿನ್ ಬಳಿ ' ಮುರಳು ಭೂಮಿಯ ಇಲಿ ' ಗಳ ಟ್ಯಾಂಕುಗಳ ಪಡೆ ಕೆಲಸ ಮಾಡುತ್ತಿದೆ.

ಒಕಿನಾ — ಒಕಿನಾದಲ್ಲಿ ಒಂದು ದ್ವೀಪವು ಅಮೇರಿಕನ್ನರವಶವಾಯಿತು. ಹವಾ ಕೆಟ್ಟಿದೆ. ವಿಮಾನ ಕೆಲಸಕ್ಕೆ ಅಡಚಣೆಯಾಗಿದೆ.

ಜೋಲೋ ದ್ವೀಪ — ಜೋಲೋನಲ್ಲಿ ಅಮೇರಿಕಾದ ಸೇನೆ ಬಂದಳಿದಿದೆ.

ಇಟಲಿ — ಬ್ರಿಟೀಷ್ ಸೇನೆ ರೆನೊ ನದಿ ದಾಟಿದೆ.

ಆಕಾಶವಾಣಿ 13—4—45

ಮೈಸೂರು ಕೇಂದ್ರ ಬೆಳಿಗ್ಗೆ 8-50, ಮಧ್ಯಾಹ್ನ 2-50 ಸಾ. 6-30, 7-30. ರಾತ್ರಿ 10. ಬೆ. 8 ದೇವರನಾಮ, 8.25 ಮುಖಪೀಠಿಕೆ ಮತ್ತು 2 ವನಿತ ವಾಣಿ (ಹಿಂದಿ), 2-20 ಗೋಷ್ಟಿವಾದ್ಯ. ಸಾ 6 ಅದಾಬ್ ಅರಬ್ ಮಿ | ನೂರ್‌ರಿಂದ, 6-5 ಪೊರಾಣ ಪಠಣ ಮಿ || ಅಬ್ದುಲ್ಲಾರಿಂದ, 6-20 ವಿಧೇಯಾಧಿ ವಿ || ಯಾಹಿಯಾರಿಂದ, 7 ಕರ್ನಾಟಕ ಹಾಡುಗಾರಿಕೆ 7-15 ದೇವೀಸ್ತೋತ್ರ, ರಾ 8 ಹಾಡಿಕೆಗಳು ಶ್ರೀ ಎ. ಎಸ್. ಮೂರ್ತಿರಾವ್ ಎಂ, ಎ ರವರಿಂದ. 8 15 ಹಿಂದೂ ಸ್ಥಾನಿ ಹಾಡುಗಾರಿಕೆ ಶ್ರೀಮತಿ ಲಕ್ಷ್ಮೀಬಾಯಿ ಭಾವೆ ಯವರಿಂದ

ಸೂಚನೆ — ಸ್ವಾರ ಯುಗಾದಿ ಪ್ರಯುಕ್ತ ನಾಳೆಯ ದಿನಕ ಸತ್ಯವಾದಿ ಪತ್ರಿಕೆಯು ಪ್ರಕಟಿಸಲ್ಪಡುವುದಿಲ್ಲ.

ಮ್ಯಾನೇಜರ್

ಇಟಲಿಗೆ ಹೊಸದಾಗಿ ನೇಮಕರಾಗಿರುವ ಬ್ರಿಟಿಷ್ ರಾಯಭಾರಿ

ಪಾರ್ಥವ ವ್ಯಯ ಪಾವ್ಯ ಸಂವತ್ಸರಗಳ ಫಲಗಳು

ಪಾರ್ಥವನಾಮ ಸಂವತ್ಸರದಲ್ಲಿ ಗುರುವು ಕಾಲನಾಗಿಯೂ, ಸೇನಾಧಿಪತಿಯಾಗಿಯೂ, ಅರ್ಘಾರ್ಘಾಧಿಪತಿಯಾಗಿಯೂ ಮೇಘಾಧಿಪತಿಯಾಗಿಯೂ, ಶುಕ್ರನು ಮಂತ್ರಿಯಾಗಿಯೂ ಇರುವುದರಿಂದ ದೇಶದಲ್ಲಿ ಶುಭಕಾರ್ಯಗಳು ಹೆಚ್ಚಾಗಿ ನಡೆಯುತ್ತವೆ. ಸ್ತ್ರೀಯರು ಸರ್ವ ಸ್ವಾತಂತ್ರ್ಯತೆಯನ್ನು ಹೊಂದಿದವರಾಗಿರುತ್ತಾರೆ. ಸಸ್ಯಧಾನ್ಯಾಧಿಪತಿಗಳು ಚಂದ್ರಶನಿಗಳಾದುದರಿಂದ ಜಲಾಧಾರ ಬೆಳೆಗಳು ಚೆನ್ನಾಗಿ ಫಲಿಸುವವು. ಕಪ್ಪು ಭೂಮಿಯಲ್ಲಿ ಚೆನ್ನಾಗಿ ಬೆಳೆಯಾಗುವುದು. ಅರ್ಘಾಧಿಪತಿಯು ಗುರುವಾದುದರಿಂದ ಬೆಳೆಗಳು ತಗ್ಗುವವು. ಬೆಳ್ಳಿ ಬಂಗಾರಗಳ ಬೆಲೆಯು ತಗ್ಗುವುದು. ಮಳೆಯು ಚೆನ್ನಾಗಿ ಬೀಳುವುದು. ಪಶುಗಳು ಆರೋಗ್ಯದಿಂದಿರುತ್ತವೆ. ಬೆಳೆಗಳು 8 ರಲ್ಲಿ 5 ಭಾಗಕ್ಕೆ ಏರಿ ಬೆಳೆಯುತ್ತವೆ.

ಮುಂದೆ ಬರುವ ವ್ಯಯನಾಮ ಸಂವತ್ಸರದಲ್ಲಿ ರಾಜನು ಬುಧನಾಗಿಯೂ, ಮಂತ್ರಿಯು ಶನಿಯಾಗಿಯೂ, ಸೇನಾಧಿಪತಿ ಶನಿಯಾಗಿಯೂ, ಧಾನ್ಯಾಧಿಪತಿ ರವಿಯಾಗಿಯೂ, ಸಸ್ಯಾಧಿಪತಿ ಕುಜನಾಗಿಯೂ ಇರುತ್ತಾನಾದುದರಿಂದ ಬೆಳೆಯು ಕಡಮೆ. ಮೇಘಾಧಿಪತಿಯು ಶುಕ್ರನಾಗಿರುವುದರಿಂದ ಒಳ್ಳೇ ಮಳೆ ಬೀಳುವುದು. ಶುಭಾಶುಭ ಫಲಗಳು ವ್ಯಯ ಸಂವತ್ಸರದಲ್ಲಿ ಸಮವಾಗಿರುತ್ತವೆ



ಅಮೇರಿಕಾ ಸೈನಿಕರು ಜರ್ಮನ್ ಶಸ್ತ್ರಾಸ್ತ್ರ ವಾಹನವನ್ನು ಹಿಡಿಯುತ್ತಿರುವುದು.

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು
— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.



ಮೈಸೂರು ಸಾಬೂನು

ಕೊಳಕು ಬಟ್ಟೆಗಳನ್ನು ಸ್ವಚ್ಛಗೊಳಿಸುವುದ

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ಸತ್ಯವಾದಿ

ಸತ್ಯವಾದಿ ವಾರದಸಂಚಿಕೆ ಎಲ್ಲಾ ಊರುಗಳಲ್ಲೂ ಏಜಂಟರುಗಳು ಬೇಕಾಗಿದ್ದಾರೆ. ಹೆಚ್ಚಿನ ವಿಷಯಗಳಿಗೆ ಬರೆಯಿರಿ.
ಮ್ಯಾನೇಜರ್, ಸತ್ಯವಾದಿ
ಚಾಮರಾಜಪುರಂ ಮೈಸೂರು

ಆಂದವಾದ ಹೊಲಿಗೆಗೆ
— ನಮ್ಮಲ್ಲಿ ಬನ್ನಿ —
ಶ್ರೀ ಮಹಾಲಕ್ಷ್ಮಿ ಹಾಲ್
ಸಯ್ಯಾಜಿರಾವ್ ರಸ್ತೆ, ಮೈಸೂರು

ರಕ್ತವೃದ್ಧಿಗೆ — ಧಾತುಪುಷ್ಟಿಗೆ
ಶಕ್ತಿಸುಧಾ
ಸೇವನೆಯೇ ಸುಲಭೋಪಾಯ
ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

AT OPERA — From 12-4-45
POOMPAVAI
12-4-45 ರಿಂದ
'ಪೂಂಪಾವೈ'
ಲೆ
ಪಾತ್ರ - ರಾಮಸ್ವಾಮಿ, ಜೀವರತ್ನಂ, ಮಧುರಂ, ಕೃಷ್ಣಕ

At Ranjit
Pagli Duniya
ರಣಜಿತ್ ಟಾಕೀಸಿನಲ್ಲಿ
4 ನೇ ಅಮೋಘ ವಾರ
ಪಗಲಿ ದುನಿಯಾ
(ಹಿಂದಿ)
ನುಮ್ಮಾಜ್ ಶಾಂತಿ ಮೋತಿಲಾಲ್
ಷೇಕ್‌ಮುಕ್ತಾರ್ ಪಾತ್ರವಹಿಸಿರುವರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore

For Good Printing—
L. N. Press
Srirampet MYSORE



ಐ.ಜೆ. ಹಾಲ್, ಸರಾಫ್ ಅಂಗಡಿ ರವೇ ಬೀದಿ, ಮೈಸೂರು.